ಭಾನುವಾರ ಹೇಗಾದರೂ ಇದೆಯಲ್ಲಾ... ಹೊಸ ಹುಡುಗರಿಂದ ಸಹಾಯ ತೆಗೆದುಕೊಳ್ಳೋಣ' ಎಂದು ಸಣ್ಣದೊಂದು ನಗೆ ಗುರುಪಾದ ಬೀರುತ್ತಿದ್ದಂತೆ ಸೀಯೊನ್ 'ಬೇಕಾದರೆ ನಾನೂ ಬರಬಲ್ಲೆ... ಅದಕ್ಕೇನಂತೆ...' ಎಂದು ಹೇಳಿ ಅವಳ ಡೆಸ್ಕ್ ಕಡೆಗೆ ಹೊರಟು ಹೋದಳು. ಸದ್ಯ ಕೆಲಸದ ಹಂಚಿಕೆಯ ಇ–ಮೇಲ್‌ನ್ನು ಮಾತ್ರ ಕಳಿಸಿರಲಿಲ್ಲ... ದೊಡ್ಡದೊಂದು ಮನಸ್ತಾಪವೇ ನಡೆದುಹೋಗುತ್ತಿತ್ತು ಎಂದು ಗುರುಪಾದ ಸಮಾಧಾನಗೊಂಡ. ಒಂದು ಒಂದು ಎಂದು ಕೆಲಸ ಬಂದಿದ್ದರಿಂದ ಬೆಳಿಗ್ಗೆಯಿಂದ ಇಲ್ಲಿಯವರೆಗೂ ಉತ್ತರಿಸಲಾಗದೇ ಇದ್ದ ಕೆಲವು ಇ – ಮೆಲ್‌ಗೆ ಉತ್ತರ ಬರೆಯಲು ಕುಳಿತ.

ಬರುವ ಸೋಮವಾರವೇ ಇರುವ ದೊಡ್ಡ ಡೆಲಿವರಿಗಾಗಿ ದಿನ ಏನಿಲ್ಲವೆಂದರೂ ಮೂರು ಬಾರಿಯಾದರೂ ಸೀಯೊನಳನ್ನು ಭೇಟಿ ಮಾಡುತ್ತಿದ್ದ. ಬೆಳಿಗ್ಗೆ ಸುಸ್ತಿನಿಂದಾಗಿ ಬಿಳುಚಿಕೊಂಡವಳಂತೆ ಕಾಣುತ್ತಿದ್ದಳು. ಮೀಟಿಂಗ್‌ಗಳಲ್ಲಿ ಆಗಾಗ ಸ್ವಲ್ಪ ಉದ್ದನೆಯ ಉಸಿರನ್ನೂ ಬಿಡುತ್ತಿದ್ದಳು. 'ಬಸಿರಿನ ಮಾರ್ನಿಂಗ್ ಸಿಕ್‌ನೆಸ್' ಇರಬಹುದು. ಬಸುರಿನಲ್ಲಿ ಈ ಎಲ್ಲಾ ಗುಣ ಲಕ್ಷಣಗಳಿಲ್ಲದಿದ್ದರೂ ಹೆಂಗಸರು ಬೇಜಾರು ಮಾಡಿಕೊಳ್ಳುತ್ತಾರೆ ಎನ್ನುವ ಸಮಾಧಾನದಿಂದಲೂ ಹಾಗೂ ಇವನ್ನೆಲ್ಲಾ ಕೇಳುವ ಅಷ್ಟು ಸಲಿಗೆಯೂ ಇಲ್ಲವಾದ್ದರಿಂದ ಗುರುಪಾದ ಸುಮ್ಮನೇ ಇದ್ದ. ಆದರೂ ಮನದಲ್ಲಿ ನಮ್ಮ ಊರಿನ ಹೆಂಗಸರಿಗೆ ಆಗುವಂತೇ ಮಣ್ಣು, ಮಾವಿನ ಕಾಯಿ, ಬಿಂಬಲ ಕಾಯಿ ತಿನ್ನುವ ಹಂಬಲ, ಗಂಡನ ಮೇಲೆ ಸಿಟ್ಟು ಮಾಡಿಕೊಂಡು, ಅವನನ್ನು ಸಮಾಧಾನ ಮಾಡುವಾಗ... ಬಸುರಿನಲ್ಲಿ ಹೆಂಡತಿ ಸಿಟ್ಟುಮಾಡಿಕೊಳ್ಳುವುದು ಸಹಜ.... ದೇಹದಲ್ಲಿ ಆಗುವ ಬದಲಾವಣೆಗಳ ಬಗ್ಗೆ ನಿನಗೂ ಗೊತ್ತಲ್ಲ ಎಂದು... ರಾತ್ರಿ ಗಂಡನಿಂದಲೇ ಕಾಲು ಬೆನ್ನನ್ನು ತಿಕ್ಕಿಸಿಕೊಳ್ಳುವುದು ಇತ್ಯಾದಿಗಳನ್ನು ಸೀಯೊನ್ ಮೂಲಕ ಈ ದೇಶದ ಹೆಂಗಸರ ಬಯಕೆಗಳನ್ನೆಲ್ಲಾ ತಿಳಿಯಬೇಕೆಂದೆನಿಸುತ್ತಿತ್ತು. ಇವೆಲ್ಲಾ ಏನೇ ಕುತೂಹಲವಿದ್ದರೂ ಕೇಳಲಿಕ್ಕಾಗಲೀ ಹೇಳಲಿಕ್ಕಾಗಲೀ ಯಾರಿಗೂ ಸಮಯವಿರಲಿಲ್ಲ. ಎಲ್ಲರ ತಲೆಯಲ್ಲಿದ್ದುದು ಬರುವ ಸೋಮವಾರದ ಡೆಲಿವರಿ ದಿನಾಂಕ ಮಾತ್ರ.

ಶನಿವಾರದ ಬೆಳಿಗಿನ ಮೀಟಿಂಗ್‌ಗೆ ಎಲ್ಲರೂ ಒಳಗೆ ಬಂದಿದ್ದರು. ಇನ್ನೆರಡು ದಿನಗಳಲ್ಲಿ ಡೆಲಿವರಿ ಮಾಡುವ ಪ್ರಾಡಕ್ಟ್ ದೊಡ್ಡ ಸ್ಕ್ರೀನ್ ಮೇಲೆ ತಿರುಗುತ್ತಿದ್ದು, ಅದನ್ನು ಎಲ್ಲ ದಿಕ್ಕುಗಳಲ್ಲೂ ನೋಡಬಹುದಿತ್ತು. ಗುರುಪಾದ ಸುತ್ತ ಎಲ್ಲಾ ಕಡೆ ನೋಡಿದರೂ ಸೀಯೊನ್ ಕಾಣಲೇ ಇಲ್ಲ. ಅವಳೆಲ್ಲಿ ಹೋದಳು ಎಂದು ಪಕ್ಕದಲ್ಲಿದ್ದ ಹ್ಯೊಂಕಿ ಕಿಮ್‌ನ ಕಡೆ ತಿರುಗಿ ಇನ್ನೇನು ಕೇಳಬೇಕು ಎನ್ನುವುದರಲ್ಲೇ 'ಅವಳಿಗೆ ಆರಾಮಿಲ್ಲ. ಅವಳು ಎಲ್ಲಿಯವರೆಗೆ ಕೆಲಸವನ್ನು ಮುಗಿಸಿದ್ದಾಳೊ ಆ ಫೈಲ್ ನನ್ನ ಹತ್ತಿರವಿದೆ ಮತ್ತು ಅದನ್ನು ನನ್ನ ಕೆಲಸದೊಂದಿಗೆ ಮುಂದುವರಿಸುತ್ತೇನೆ. ನಿಮ್ಮ ಫೀಡ್‌ಬ್ಯಾಕ್ ಏನಿದ್ದರೂ ನನಗೆ ಕೊಡಿ... ಮತ್ತೆ... ಅವಳು ಬರುವ ಸೋಮವಾರವೂ ಬರುವುದಿಲ್ಲವೆಂದು ನನಗೆ ಮೆಸೆಜ್ ಮಾಡಿದ್ದಳು. ಅವಳ ಮ್ಯಾನೇಜರ್‌ಗೂ ತಿಳಿಸಿದ್ದಾಳಂತೆ. ನಿಮ್ಮ ಹತ್ತಿರ ಆ ಮ್ಯಾನೇಜರ್ ಬಂದು ಮಾತನಾಡುತ್ತಾರೆ' ಎಂದು 'ಬನ್ನಿ ಸ್ಕಿನ್ ಹತ್ತಿರ ಬನ್ನಿ. ಪ್ರೊಜೆಕ್ಟ್ ಬಗ್ಗೆ ಎರಡು ಮುಖ್ಯ ವಿಷಯ ಮಾತನಾಡಬೇಕು. ಇದರ ನಿರ್ಧಾರ ಸೋಮವಾರದ ಡೆಲಿವರಿಗೆ ಸಹಾಯವಾಗುತ್ತದೆ' ಎಂದು ಆ ಕಡೆ ಕಿಮ್ ಕರೆದುಕೊಂಡು ಹೋದ.

ಗುರುಪಾದನಿಗೆ ಮೈಯೆಲ್ಲಾ ಉರಿಯುವಷ್ಟು ಸಿಟ್ಟು ಬಂತು. ತನ್ನ ಹದಿನೈದು ವರುಷದ